(3) ಅಭಯಾರಣ್ಯದ ಒಳಗೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ವಾಸಿಸುತ್ತಿರುವ ಗಿರಿಜನರನ್ನು ಫೈರ ವಾಚರ್ಸಗಳನ್ನಾಗಿ ನೇಮಿಸಿದ್ದು ಈ ಗಿರಿಜನರು ಸಮ್ಮಸಿಬ್ಬಂದಿಯವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿರುವುದರಿಂದ ಆಕಸ್ಮಿಕವಾಗಿ ಹಾಗೂ ಉದ್ದೇಶಪೂರ್ವಕವಾಗಿ ಆಗುವ ನೆಲ ಬೆಂಕಿಯನ್ನು ಕೂಡಲೇ ನಂದಿಸಲು ಸಹಾಯಕರಾಗಿರುತ್ತಾರೆ.

(4) ಹೆಚ್ಚಿನ ವಾಹನಗಳನ್ನು ಬೆಂಕಿ ಕಾಲದಲ್ಲಿ ಅರಣ್ಯ ಸಿಬ್ಬಂದಿಯವರಿಗೆ ಮುಂಜಾಗ್ರತಾ ಕ್ರಮಕ್ಕಾಗಿ ನಿಯೋಜಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ 64,300 ಹೆಕ್ಟೇರ ಪ್ರದೇಶವಿರುವ ನಾಗರಹೊಳೆ ಅಭಯಾರಣ್ಯದ ಎಚ್.ಡಿ. ಕೋಟೆಯ ಪ್ರದೇಶದಲ್ಲಿ ಅಲ್ಲಲ್ಲಿ ನೆಲ ಬೆಂಕಿಯಾಗಿರುತ್ತದೆ. ನೆಲ ಬೆಂಕಿಯಾದ ಪ್ರದೇಶದಲ್ಲಿ ಮರಗಳಿಗಾಗಲೀ ಅಥವಾ ವನ್ಯಪ್ರಾಣಿಗಳಿಗಾಲೀ ನಷ್ಟ ಉಂಟಾಗಿರುವುದಿಲ್ಲ.

ಈ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದರಿಂದ ಹೆಚ್ಚಿನ ಹಾನಿಯಾಗಿಲ್ಲದೆ ಇದ್ದು, ಸ್ಥಳಗಳಲ್ಲಿ ಸಣ್ಣಪುಟ್ಟ ಪ್ರಮಾಣದ ನೆಲಬೆಂಕಿಯು ಸಂಭವಿಸಿರುತ್ತದೆ. ಯಾವುದೇ ಮರಗಳಿಗೆ ಅಥವಾ ಪ್ರಾಣಿಗಳಿಗೆ ಹಾನಿಯಾಗಿರುವುದಿಲ್ಲ. ಅಭಯಾರಣ್ಯದ ಮುಖ್ಯ ಆವರಣ (ಕೋರಪರಿಯಾ)ದಲ್ಲಿ ಯಾವುದೇ ಬೆಂಕಿ ಸಂಭವಿಸಿರುವುದಿಲ್ಲ. ಈ ಬೇಸಿಗೆಯ ದಿವಸಗಳಲ್ಲಿ ಸ್ವಾಭಾವಿಕವಾಗಿ ಹಾಗೂ ಉದ್ದೇಶಪೂರ್ವಕವಾಗಿ ಸಂಭವಿಸುವ ಈ ಬೆಂಕಿಯನ್ನು ತಡೆಗಟ್ಟಲು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಈ ಉತ್ತರದಲ್ಲಿ 'ಸುಟ್ಟು ಹಾಕಿ ಬೆಂಕಿ ರೈಲು ಮಾಡಲಾಗಿರುತ್ತದೆ' ಎಂದು ಇದೆ. ಬೆಂಕಿ ರೈಲು ಯಾವುದು?

ಒಬ್ಬ ಮಾನ್ಯ ಸದಸ್ಯರು : ಬೆಂಕಿ ರೈಲ್ ಅಲ್ಲ, ಅದು ಬೆಂಕಿ ಲೈನು ಇದರಲ್ಲಿ ಬೆರಳಚ್ಚು ತಪ್ಪಾಗಿದೆಯಷ್ಟೆ.

ಉಪಾಧ್ಯಕ್ಷರು : ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ಮಾನ್ಯ ಗೋವಿಂದೇಗೌಡರು ಹೇಳಿಕೆಯನ್ನು ಕೊಡಬೇಕು.

(ಆ) ಮಲೆನಾಡು ಪ್ರದೇಶಾಭಿವೃದ್ಧಿ ಹಾಗೂ ಹೈದರಾಬಾದ್ ಡೆವೆಲಪಮೆಂಟ್ ಬೋರ್ಡ್ ಕುರಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಗೋವಿಂದೇಗೌಡರು ದಯವಿಟ್ಟು ತಮ್ಮ ಹೇಳಿಕೆಯನ್ನು ಕೊಡಬೇಕು.

+ ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ನಿಯಮಗಳ ಪ್ರಕಾರ ಮಂಡಳಿಯು ತನ್ನ ಹಣ ಖರ್ಚು ಮಾಡಬೇಕಾದಲ್ಲಿ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪತ್ರ ಇಲಾಖೆ ಮುಖಾಂತರ ಬಿಡುಗಡೆ ಮಾಡಬೇಕಾಗಿದೆ. ಇದರಿಂದ

ತುಂಬ ತೊಂದರೆಯಾಗುವುದನ್ನು ಗಮನಿಸಿ ದಿನಾಂಕ 6.10.1995 ರಂದು ಮಂಡಳಿಯ ನಿಯಮ 11ಎ ಯನ್ನು ತಿದ್ದುಪಡಿ ಮಾಡಲು ತೀರ್ಮಾನಿಸಲಾಗಿದೆ. ಅದರಂತೆ ಹಣವನ್ನು ನೇರವಾಗಿ ಅನುಷ್ಠಾನ ಅಧಿಕಾರಿಗಳಿಗೆ ಬಿಡುಗಡೆಗೊಳಿಸಲು ಈ ಬಗ್ಗೆ ಸೂಕ್ತ ಆದೇಶ ಹೊರಡಿಸುವ ಬಗ್ಗೆ ಆರ್ಥಿಕ ಇಲಾಖೆಯ ಪರಿಶೀಲನೆಗೆ ಹೋಗಿದ್ದು ಸದ್ಯದಲ್ಲಿಯೇ ಅದು ಹೊರಬೀಳಲಿದೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ 1993-94ನಲ್ಲಿ 33 ಕೋಟಿ ರೂಪಾಯಿ ಇದ್ದು ಅದನ್ನು ಬಿಡುಗಡೆ ಮಾಡಲಾಗಿದೆ. 1994-95ರಲ್ಲಿ 35 ಕೋಟಿ ರೂಪಾಯಿ ಇದ್ದು ಅದರಲ್ಲಿ 24 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದಾರೆ. 1995-96ರಲ್ಲಿ 27 ಕೋಟಿ ರೂಪಾಯಿ ಒದಗಿಸಿ ಅದರಲ್ಲಿ 3 ಕೋಟಿ ರೂಪಾಯಿಗಳನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ಆ ಬಾಬಿಗಾಗಿ ಇಟ್ಟಿರತಕ್ಕಂಥದ್ದು. 1995-96ರಲ್ಲಿ ಮಂಡಳಿಗೆ ನೀಡಲಾಗಿದ್ದ 27 ಕೋಟಿ ರೂಪಾಯಿಯಲ್ಲಿ ಮೊದಲ ಕಂತಿನಲ್ಲಿ ಏಳೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ. ಮಲೆನಾಡಿನಲ್ಲಿ ಮಳೆಗಾಲ ಮುಗಿದ ನಂತರವೇ ಸಾಮಾನ್ಯವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳೆ ಬೇಕಾಗಿರುವುದರಿಂದ ಈ ಕಾಮಗಾರಿಗಳನ್ನು ಡಿಸೆಂಬರ್ ತಿಂಗಳ ನಂತರವೇ ಮುಗಿಸಲಾಗುತ್ತದೆ. ಆದ್ದರಿಂದ ಈ ಹಣ 31ನೇ ತಾರೀಖಿನೊಳಗೆ ಬಿಡುಗಡೆ ಆಗಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, 11(ಎ)ಗೆ ಒಂದು ತಿದ್ದುಪಡಿಯನ್ನು ತರಬೇಕು, ಸ್ವತಂತ್ರವಾಗಿ ಹಣಕಾಸನ್ನು ನಿರ್ವಹಿಸುವಂಥ ಶಕ್ತಿ ಅವಕಾಶ ಈ ಮಂಡಳಿಗೆ ಸಿಗಬೇಕು ಎನ್ನುವುದನ್ನು ತಮ್ಮ ಅಧ್ಯಕ್ಷತೆಯಲ್ಲಿ ಸರ್ವಾನುಮತದಿಂದ ಯಾವ ನಿರ್ಣಯವನ್ನು ಮಾಡಿದ್ದೇವೆ, ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಇದನ್ನು ಆರ್ಥಿಕ ಇಲಾಖೆಯ ಪರಿಶೀಲನೆಗೆ ಕಳುಹಿಸಿದ್ದೇವೆಂದು ಹೇಳಿದ್ದೀರಿ. ಇಡೀ ರಾಜ್ಯದಲ್ಲಿರುವಂಥ ಬೇರೆ ಎಲ್ಲಾ ವ್ಯವಸ್ಥೆಯಲ್ಲಿ ಆಯಾಯ ಇಲಾಖೆಯ ಹಣವನ್ನು ಅವರೇ ಖರ್ಚು ಮಾಡುವಂಥ ಸ್ವಾತಂತ್ರ್ಯ ಇದ್ದಾಗ ಆರ್ಥಿಕ ಇಲಾಖೆಗೆ ಇದನ್ನು ಕಳುಹಿಸಿದರೆ ಇದರಲ್ಲಿ ವ್ಯತ್ಯಾಸವೇನಿದೆ? ನಿಮಗೆ ಒಂದು ಬೋರ್ಡ ಮಾಡಿದ್ದೇವೆ, ಅದಕ್ಕೆ ಅಧ್ಯಕ್ಷರನ್ನು ಮಾಡಿದ್ದೇವೆ, ಸ್ವತಂತ್ರ ಹಣ ಖರ್ಚು ಮಾಡುವಂಥ ಸ್ವಾತಂತ್ರ, ಅವರ ಬಗ್ಗೆ ವಿಶ್ವಾಸ ಇಲ್ಲವೇ? ಅವರ ಬಗ್ಗೆ ನಂಬಿಕೆ ಇಲ್ಲವೇ? ಅದಕ್ಕೋಸ್ಕರ, ತಾವು ಸಚಿವರಾಗಿ, ನೀವೇ ಅದರ ಅಧ್ಯಕ್ಷರಾಗಿರುವಂಥ ಈ ಕಾಲದಲ್ಲಿ ಈ ಸದನದೊಳಗೆ ದಯಮಾಡಿ ತಾವು ಆಶ್ವಾಸನೆ ಕೊಡಬೇಕಾಗುತ್ತದೆ. ಅದೇನೆಂದರೆ 6 ಅಥವಾ 7ನೇ ತಾರೀಖಿನೊಳಗಾಗಿ ಸೆಕ್ಷನ್ 11ಎ ಒಂದು ತಿದ್ದುಪಡಿಯನ್ನು ಅಧಿವೇಶನದೊಳಗೆ ತರುತ್ತೇವೆ ಎಂದು ಸ್ಪಷ್ಟವಾಗಿ ಹೇಳಬೇಕು. ಎರಡನೆಯದಾಗಿ 1995ರಲ್ಲಿ ಮುಂದಿನ ವರ್ಷ 60ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳುತ್ತೀರಿ, ಈ ವರ್ಷ ಬಿಡುಗಡೆ ಮಾಡಿದಂಥ 27 ಕೋಟಿ ಹಣದಲ್ಲಿ, ಇದರಲ್ಲಿ ಇದುವರೆಗೆ ಏಳೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿದರೆ ಇದು ಯಾವ ಧರ್ಮ? ಹೀಗಾದರೆ ಯಾರು ಕೆಲಸ ಮಾಡುತ್ತಾರೆ, ಅದು ಹೇಗೆ ಸಾಧ್ಯವಾಗುತ್ತದೆ? 1995-96ರಲ್ಲಿ ಇರುವಂಥ 27 ಕೋಟಿ ರೂಪಾಯಿಗಳ ಹಣವನ್ನು ಪೂರ್ಣವಾಗಿ ಖರ್ಚು ಮಾಡುತ್ತೇವೆ ಮತ್ತು ಈಗ ಬರುವ 5ನೇ ಅಥವಾ 6ನೇ ತಾರೀಖು ಅವಧಿ ಮುಗಿಯುವುದರೊಳಗಾಗಿ ಸೆಕ್ಷನ್ 11(ಎ)ಗೆ ತಿದ್ದುಪಡಿಯನ್ನು ತರುತ್ತೇನೆ ಎನ್ನುವ ಭರವಸೆಯನ್ನು ತಾವು ದಯಮಾಡಿ ಕೊಡಬೇಕು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, 27 ಕೋಟಿ ರೂಪಾಯಿಗಳಲ್ಲಿ ಕೇವಲ ಏಳೂವರೆ ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆ ಮಾಡಲಾಗಿದೆ. ಯಾವ ಕೆಲಸಗಳೂ ಪ್ರಾರಂಭವಾಗಲಿಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿಯು 71 ಕ್ಷೇತ್ರಗಳನ್ನು ಒಳಗೊಂಡಿದೆ. ಇದರ ವಿಸ್ತೀರ್ಣವನ್ನು ಜಾಸ್ತಿ ಮಾಡುತ್ತಿದ್ದಾರೆಯೇ ವಿನಃ ವರ್ಷವರ್ಷ ಕೊಡುತ್ತಿರುವ ಹಣವನ್ನು ಜಾಸ್ತಿ ಮಾಡುತ್ತಿಲ್ಲ. ದಯಮಾಡಿ ಸರ್ಕಾರದವರು ಗಮನಿಸಿ, ವಿಶೇಷ ಪರಿಸ್ಥಿತಿಯನ್ನು ಮನಗಂಡು ಈ ಮಂಡಳಿಯನ್ನು ಮಾಡಿರುವಂಥಾದ್ದಾಗಿದೆ. ಈ ಮಂಡಳಿಗೆ ಹಣ ಬಿಡುಗಡೆ ಮಾಡದೇ ಇದ್ದರೆ ಇದರ ಉದ್ದೇಶ ವಿಫಲತೆ ಹೊಂದುತ್ತದೆ. ಮಾನ್ಯ ಗೋವಿಂದೇಗೌಡರಂಥ ಒಳ್ಳೆಯ ಸಚಿವರಿಗೆ ಇದರ ಜವಾಬ್ದಾರಿಯನ್ನು ಕೊಟ್ಟಿದ್ದೀರಿ, ಆದರೆ ಹಣವನ್ನು ಅವರ ಕೈಗೆ ಕೊಡದಿದ್ದರೆ ಅವರಾದರೂ ಏನು ಮಾಡುತ್ತಾರೆ? ದಯಮಾಡಿ ಹಣವನ್ನು ಬಿಡುಗಡೆ ಮಾಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಈ ಮಲೆನಾಡು ಅಭಿವೃದ್ಧಿ ಮಂಡಳಿಯ ಕಡತ ನನ್ನ ಕಛೇರಿಗೆ ಬಂದಿದೆ. ಇವತ್ತು ಮಧ್ಯಾಹ್ನದೊಳಗೆ ಯಾವ ಯಾವ ಬಾಬಿಗೆ, ಯಾವ ಯಾವ ಬಿಲ್ಲಿಗೆ, ಯಾವ ಯಾವ ಕಾಮಗಾರಿಗೆ ಎಷ್ಟು ಹಣ ಬಿಡುಗಡೆ ಮಾಡಬೇಕು ಎಂಬ ಪ್ರಪೋಸಲ್ ಬಂದಿದೆ. ಇನ್ನೊಂದು ಅರ್ಧ ಗಂಟೆ ಅಥವಾ ಒಂದು ಗಂಟೆ ಒಳಗಾಗಿ ಇದನ್ನು ಕ್ಲಿಯರ್ ಮಾಡುತ್ತೇನೆ.

ಶ್ರೀ ಪಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದರು, ಆ ಮಂಡಳಿಗೆ ಸಂಪೂರ್ಣವಾದಂಥ ಅಧಿಕಾರ ಇರಬೇಕು. ಆ ಮಂಡಳಿಯ ಅಧ್ಯಕ್ಷರ ಬಗ್ಗೆ ನನಗೆ ಬಹಳ ಗೌರವ ಇದೆ. ಬಹಳ ಒಳ್ಳೆಯ ಅಧ್ಯಕ್ಷರು ಇದ್ದಾರೆ. ಕೆಲಸ ಮಾಡಬೇಕೆನ್ನುವಂಥ ಉತ್ಸಾಹ ಅವರಲ್ಲಿ ಇದೆ. ನನಗೇನನ್ನಿಸುತ್ತದೆ ಎಂದರೆ ಈಗ ಇದಕ್ಕೆ ಕೊಟ್ಟಿರತಕ್ಕಂಥ ಹಣ ಸಾಲದು. ಕನಿಷ್ಟ ನೂರು ಕೋಟಿ ರೂಪಾಯಿಗಳನ್ನಾದರೂ ಮಲೆನಾಡು ಅಭಿವೃದ್ಧಿ ಮಂಡಳಿಗೆ ಒದಗಿಸಬೇಕೆಂದು ತಮ್ಮ ಮೂಲಕ ಹಣಕಾಸಿನ ಸಚಿವರ ಗಮನವನ್ನು ಸೆಳೆಯುತ್ತೇನೆ. ಸುಮಾರು 75 ಪ್ರದೇಶಗಳು ಬರುತ್ತವೆ ಸಂಪೂರ್ಣವಾಗಿ ಖರ್ಚು ಮಾಡತಕ್ಕಂಥದ್ದು ಕಾರ್ಯಕ್ರಮ ಹಾಕಿಕೊಳ್ಳತಕ್ಕಂಥಾದ್ದು ಪ್ರತಿಯೊಂದಕ್ಕೂ ಅಭಿವೃದ್ಧಿ ಮಂಡಳಿಗೆ ಹಣವನ್ನು ಬಿಡುಗಡೆ ಮಾಡಬೇಕು. ಆದ್ದರಿಂದ 100 ಕೋಟಿ ರೂಪಾಯಿಗಳಾದರೂ ಬೇಕಾಗುತ್ತದೆ. ಇಲ್ಲದಿದ್ದರೆ ಲೋಕೋಪಯೋಗಿ ಇಲಾಖೆಯವರನ್ನು ಕೇಳಬೇಕಾಗುತ್ತದೆ, ಇಲ್ಲದಿದ್ದರೆ ಮತ್ತೊಬ್ಬರನ್ನೂ ಕೇಳಬೇಕಾಗುತ್ತದೆ ಆದ್ದರಿಂದ ಇಂತಹ ವ್ಯವಸ್ಥೆಯಿಲ್ಲದೆ ಆ ಮಲೆನಾಡು ಅಭಿವೃದ್ಧಿ ಮಂಡಳಿಯ ಮೂಲಕವೇ ಎಲ್ಲಾ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುವಂತಾಗಬೇಕು.

ಆದುದರಿಂದ ತಮ್ಮ ಮೂಲಕ ನಾನು ಹೇಳುವುದು ಏನೆಂದರೆ ಆ ಮಲೆನಾಡಿನ ಅಭಿವೃದ್ಧಿಯ ಹಣವನ್ನು ಸಂಪೂರ್ಣವಾಗಿ ಅದಕ್ಕಾಗಿ ಖರ್ಚು ಮಾಡುವಂಥದ್ದು, ಕಾರ್ಯಕ್ರಮಗಳನ್ನು ಹಾಕುವಂಥದ್ದು ಪ್ರತಿಯೊಂದನ್ನು ಅಭಿವೃದ್ಧಿಮಂಡಳಿಗೆ ಬಿಡುಗಡೆ ಮಾಡಬೇಕು. ಇಲ್ಲಿ ಒಂದು ಕಡೆ ಲೋಕೋಪಯೋಗಿ ಇಲಾಖೆಯವರನ್ನು ಕೇಳಬೇಕು, ಅಲ್ಲ ಮತ್ತೊಂದು ಇಲಾಖೆಯನ್ನು ಕೇಳಬೇಕು ಎನ್ನತಕ್ಕಂತಹ ವ್ಯವಸ್ಥೆ ಇಲ್ಲದೇ ಆ ಮಲೆನಾಡು ಅಭಿವೃದ್ಧಿಯ ಮುಖಾಂತರವೇ ಎಲ್ಲಾ ಅಭಿವೃದ್ಧಿ ಕೆಲಸಗಳು ಆಗುವಂತಹ

ವ್ಯವಸ್ಥೆಯಾಗಬೇಕು. ಬೇಕಾದರೆ ಇದಕ್ಕೆ ಈ ಸದನದಲ್ಲಿಯೇ ತಿದ್ದುಪಡಿಯನ್ನು ತರಲಿ ನಾವು ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಈ ಮಲೆನಾಡು ಅಭಿವೃದ್ಧಿ ಬಗ್ಗೆ ನಾನು ಸಹ ಗಮನ ಸೆಳೆಯುವ ಸೂಚನೆಯಲ್ಲಿ ....

ಉಪಾಧ್ಯಕ್ಷರು : ಅಲ್ಲ ಈ ಮಲೆನಾಡು ಪ್ರದೇಶದಲ್ಲಿ ಬರತಕ್ಕಂತಹ ಎಲ್ಲಾ ಸದಸ್ಯರುಗಳು ಮಾತನಾಡುತ್ತೇನೆ ಎಂದರೆ ಸಾಧ್ಯವಾಗುವುದಿಲ್ಲ. ಆದರೆ ಸಹಿ ಮಾಡಿದವರು ಮಾತ್ರ ಮಾತನಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ನಾನೂ ಸಹ ಸಹಿ ಮಾಡಿರುವುದರಿಂದ ನಮ್ಮಕ್ಷೇತ್ರಗಳಲ್ಲಿ, ಜಿಲ್ಲೆಗಳಲ್ಲಿ ಆಗಬೇಕಾದಂತಹ ಕಾಮಗಾರಿಗಳ ಬಗ್ಗೆ ಸ್ವಲ್ಪ ವಿಳಂಬವಾಗಿರುವುದರಿಂದ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡಿದ್ದೇವೆ.

ಉಪಾಧ್ಯಕ್ಷರು : ಈಗಾಗಲೇ ಇದರ ಬಗ್ಗೆ ಅರ್ಧ ಗಂಟೆಗಳ ಕಾಲ ಚರ್ಚೆಯಾಗಿದೆ, ಎಲ್ಲಾ ವಿಷಯಗಳನ್ನು ಹೇಳಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ತಮ್ಮ ಮುಖಾಂತರ ಸಂಬಂಧಪಟ್ಟಂತಹ ಮಂತ್ರಿಗಳಿಗೆ 1992, 93, 94, 95 ಸಾಲಿನಲ್ಲಿ ಸರ್ಕಾರ ಅಯವ್ಯಯದಲ್ಲಿ ನಿಗಧಿಪಡಿಸಿರತಕ್ಕಂತಹ ಹಣವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿಲ್ಲ. ಉಳಿದಿರತಕ್ಕಂತಹ ಹಣವನ್ನು ಬಿಡುಗಡೆ ಮಾಡುವಂತೆ ಸರ್ವಸದಸ್ಯರ ಸಭೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ. ಆದರೆ ಇಲ್ಲಿಯವರೆಗೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಸರ್ಕಾರದಿಂದ 1995-96ನೇ ಸಾಲಿನ ಹಣವು ಸೇರಿ 42 ಕೋಟಿ ರೂಪಾಯಿಗಳಷ್ಟು ಹಣ ನಮ್ಮ ಮಲೆನಾಡು ಅಭಿವೃದ್ಧಿ ಸಂದಾಯವಾಗಬೇಕಾಗುತ್ತದೆ. ಏಕೆ ಈ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ ಎಂದರೆ, ನಮ್ಮ ಕಷ್ಟಗಳನ್ನು ಇಲ್ಲಿ ಹೇಳಿಕೊಳ್ಳುವುದಕ್ಕೆ ಅವಕಾಶ ಇಲ್ಲದಿದ್ದರೆ ನಾವು ಎಲ್ಲಿ ಹೇಳಿಕೊಳ್ಳಬೇಕು? ನಮ್ಮ ಕಷ್ಟ ಏನು ಇದೆ ಎಂದರೆ ಬರಬೇಕಾದಂತಹ ಹತ್ತೊಂಭತ್ತುವರೆ ಕೋಟಿ ರೂಪಾಯಿ ಹಣ ಮಾರ್ಚ್ 31ರೊಳಗೆ ಖರ್ಚು ಮಾಡಬೇಕು ಎಂಬ ಆದೇಶವನ್ನು ನೀಡಿದರೆ ಮತ್ತೆ ಹಣ ಲ್ಯಾಪ್ಸ್‌ಆಗುವಂತಹ ಅವಕಾಶಗಳು ಆಗುತ್ತದೆ. ಆ ದೃಷ್ಟಿಯಿಂದ ಈ ಹಣ ಮುಂದಿನ ವರ್ಷದಲ್ಲಿಯೂ ಸಹ ಖರ್ಚು ಮಾಡುವಂತೆ ಸರ್ಕಾರದವರು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಯೇ ಎಂದು ಉತ್ತರವನ್ನು ನೀಡಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಈಗ ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅದು ಏಳುವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇನ್ನು ಉಳಿದಿರತಕ್ಕಂತಹ ಏಳುವರೆ ಕೋಟಿ ರೂಪಾಯಿಗಳನ್ನು ಇವತ್ತು ಸಾಯಂಕಾಲದ ಒಳಗಡೆ ಬಿಡುಗಡೆ ಮಾಡುತ್ತಾರೆ. ಕೆಲಸವು ಸಹ ಆಗುತ್ತಿದೆ. ನಾನು ಮೊದಲೇ ತಿಳಿಸಿದಂತೆ ಮಲೆನಾಡಿನಲ್ಲಿ ಮಳೆಯು ಪ್ರಾರಂಭವಾದ ನಂತರ ಕೆಲಸ ಪ್ರಾರಂಭವಾಗಿದೆ. ಅನೇಕ ಕೆಲಸಗಳು ಆಗಿವೆ ಅವುಗಳಿಗೆ ದುಡ್ಡು

ಕೊಡಬೇಕಾದಂತಹ ಅವಶ್ಯಕತೆ ಇದೆ. ದುಡ್ಡನ್ನು ಬಿಡುಗಡೆ ಮಾಡುತ್ತೇವೆ. ನಾನು ಹಣಕಾಸಿನ ಮಂತ್ರಿಗಳನ್ನು ಹೋಗಿ ನೋಡಿದಾಗ ಕೂಡಲೇ ಇನ್ನು ಏಳುವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಏಳೂವರೆ ಕೋಟಿ ರೂಪಾಯಿಗಳನ್ನು ಮೊದಲೇ ಬಿಡುಗಡೆ ಮಾಡಿದ್ದಾರೆ, ಇನ್ನು ಏಳುವರೆ ಕೋಟಿ ರೂಪಾಯಿಗಳನ್ನು ಇನ್ನು ಒಂದೆರಡು ದಿವಸಗಳಲ್ಲಿ ಬಿಡುಗಡೆಯಾಗುತ್ತದೆ. ಇನ್ನು ಒಟ್ಟು ಈ ಮಲೆನಾಡು ಅಭಿವೃದ್ಧಿಗಾಗಿ ಹತ್ತೊಂಭತ್ತುವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಮಾನ್ಯ ಸದಸ್ಯರು ತಾವುಗಳು ಏನು ಹೇಳಿದ್ದೀರಿ ಉಳಿದ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹಣಕಾಸಿನ ಸಚಿವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, 25 ಕೋಟಿ ರೂಪಾಯಿಗಳು ಬಿಡುಗಡೆಯಾಗುವುದು ಹಾಗೆಯೇ ಉಳಿದಿದೆ ಇದರ ಬಗ್ಗೆ ಸಿದ್ದರಾಮಯ್ಯನವರು out of Rs. 60 crores, only Rs. 25 crores have been released and Rs. 35 crores are yet to be released. Hardly a month is left. ಆದ್ದರಿಂದ ಅದರ ಬಗ್ಗೆ ಹೇಳಿಬಿಡಿ.

SRI H.D. DEVEGOWDA : That is also going to be released.

೪) ಚಾಮರಾಜನಗರದಲ್ಲಿ ಶಾಂತಿಸಮಿತಿಗೆ ಬಂದವರ ಬಂಧನ

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನೆನ್ನೆ ದಿವಸ ಅಧ್ಯಕ್ಷರ ಮುಖಾಂತರ ಚಾಮರಾಜನಗರದ ಬಗ್ಗೆ ಪ್ರಸ್ತಾಪ ಮಾಡಿದಾಗ ಸಾಯಂಕಾಲ ಬಂದು ಉತ್ತರವನ್ನು ಕೊಡುತ್ತೇನೆಂದು ಸಚಿವರು ಉತ್ತರ ಹೇಳಿದ್ದರು. ಈಗ ಇದರ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ. ಬಂಧಿತರು ಮೈಸೂರು ನಗರದ ಜೈಲಿನಲ್ಲಿ ಕೊಳೆಯುತ್ತಿದ್ದಾರೆ, ಅಮರಣಾಂತರ ಉಪವಾಸವನ್ನು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಅಲ್ಲಿರತಕ್ಕಂತಹ 7 ಜನರನ್ನು ಬಂಧನ ಮಾಡಿ ಮೈಸೂರು ನಗರದಲ್ಲಿರತಕ್ಕಂತಹ ಜೈಲಿನಲ್ಲಿ ... ಸನ್ಮಾನ್ಯ ಗೃಹ ಸಚಿವರೆ, ಚಾಮರಾಜ ನಗರದಲ್ಲಿ ಯಾವುದೋ ಒಂದು ಘಟನೆಯು ನಡೆಯಿತು ಎನ್ನುವ ಕಾರಣಕ್ಕಾಗಿ ಶಾಂತಿ ಸಮಿತಿಯ ಸಭೆಯನ್ನು ಕರೆದಾಗ ಆ ಸಭೆಗೆ ಬಂದಂತಹ 7 ಜನರನ್ನು ಬಂಧನ ಮಾಡಿದ್ದಾರೆ. ಅದರಲ್ಲಿ ಬಿ.ಜೆ.ಪಿ.ಯ ಇಬ್ಬರು ಪುರಸಭೆಯ ಸದಸ್ಯರೂ ಸಹ ಇದ್ದಾರೆ. ನಾನು ಇಲ್ಲಿ ಪ್ರಸ್ತಾಪ ಮಾಡುವುದು ಏನೆಂದರೆ ಘಟನೆಯ ಬಗ್ಗೆ ಪ್ರಸ್ತಾವವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿಲ್ಲ. ಕಾನೂನಿನ ಸುವ್ಯವಸ್ಥೆಯ ಬಗ್ಗೆ ಕ್ರಮ ತೆಗೆದುಕೊಂಡು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ. ನಾನು ಅಲ್ಲಿರತಕ್ಕಂತಹ ಸಬ್ ಡಿವಿಷನ್ ನ್ಯಾಯಾಧೀಶರು ತನ್ನ ಕಾನೂನಿನ ಚೌಕಟ್ಟನ್ನು ಮೀರಿ ಒಂದು ಆದೇಶವನ್ನು ಕೊಟ್ಟಿದ್ದಾರೆ. ಅದರಲ್ಲಿ ಏನಿದೆ ಎಂದರೆ ಆರೋಪಿಗಳಾದ ನೀವು ಹತ್ತು ಸಾವಿರ ರೂಪಾಯಿಗಳ ಬಾಂಡನ್ನು ಹಾಗೂ ಮೂರು ವರ್ಷಗಳವರೆಗೆ ಉತ್ತಮ ನಡವಳಿಕೆಯ ಬಗ್ಗೆ ನೀಡತಕ್ಕದ್ದು. ಹಾಗೂ ಚಾಮರಾಜನಗರಕ್ಕೆ ಸೇರಿದ ಜಾಲ್ತಿ ತಿಂಗಳಿನಲ್ಲಿಯೇ ಒಂದು ಲಕ್ಷ ರೂಪಾಯಿಗಳ ಸ್ಯಾಲರಿ ಸರ್ಟಿಫಿಕೇಟನ್ನು ಹೊಂದಿರುವಂತಹ ವ್ಯಕ್ತಿಯ ಜಾಮೀನ್ನನ್ನು ಮತ್ತು ಕಳೆದ 15 ವರ್ಷಗಳಿಂದ